## ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂಃ 434/2016 ಸಿ.ಡಬ್ಲ್ಯೂ –06 ಪಿ.ಡಬ್ಲ್ಯೂ -6

| | | |
|---|---|---|
| ಹೆಸರು | ಃ | ಪ್ರಕಾಶ |
| ತಂದೆಃ ಗಂಡ | ಃ | ಭೀಮಶಾ |
| ವಯಸ್ಸು | ಃ | ೪೦ ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ದೇವಂತಗಿ |

ದಿನಾಂಕಃ೦೩.೦೩.೨೦೨೫

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿತರ ಪರಿಚಯ ಇರುತ್ತದೆ. ಚಾಸಾ-1 ರಿಂದ 5, 7 ರಿಂದ 9 ರವರ ಪರಿಚಯ ಇರುತ್ತದೆ.

ನಾನು ಚಾಸಾ-೧ ರವರ ಜಮೀನನ್ನು ಪಾಲಿಗೆ ಬಿತ್ತು ಬೆಳೆ ಮಾಡಿರುತ್ತೇನೆ, ಆ ಸಮಯದಲ್ಲಿ ಈ ಘಟನೆ ನಡೆದಿರುತ್ತದೆ. ನನ್ನ ಕೌಲು ಮುಗಿಯಿತು, ಅವರ ಜಗಳವಾಗಿರುತ್ತದೆ, ನಾನು ಅವರ ಜಮೀನನ್ನು ಮಾಡುವುದನ್ನು ಬಿಟ್ಟಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿ.೧೭.೧೦.೨೦೧೫ ರಂದು ಚಾಸಾ-೧, ೭ ಮತ್ತು ನಾನು ಆರೋಪಿ ನಂ.೧ ರವರ ಜಮೀನಿಗೆ ಪಂಚಾಯತಿ ಮಾಡಲು ಹೋಗಿದ್ದೆವು ಎಂದರೆ ಸರಿ. ಮಹಾದೇವಿರವರ ಜೊತೆ ಆರೋಪಿ ನಂ.೨ ರಿಂದ ೭ ರವರು ಇದ್ದರು. ಚಾಸಾ-೧ ರವರು ಆರೋಪಿ ನಂ.೧ ರವರಿಗೆ ಬಡ್ಡಿ ಸಮೇತ ಹಣವನ್ನು ತೀರಿಸುತ್ತಿದ್ದೇವೆ, ನಮ್ಮ ಹೊಲ ನಮಗೆ ಬಿಡಿ ಎಂದು ಕೇಳಿದರು ಎಂದರೆ ಸರಿ. ಆಗ ಆರೋಪಿ ನಂ.೨ರವರು ಚಾಸಾ-೧ ರವರಿಗೆ ಹೊಲದ ವ್ಯವಹಾರ ಎಲ್ಲಾ ಮುಗಿದಿದೆ ಎಂದು ಅವಾಚ್ಯವಾಗಿ ಬೈದ್ದು ಬೆನ್ನು ಬಗ್ಗಿಸಿ ಹೊಡೆದಿರುತ್ತಾನೆ ಎಂದರೆ ಸಾಕ್ಷಿಯು ನಾನು ಆ ಸಮಯದಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಚಾಸಾ-೪ ರವರು ಬಿಡಿಸಲು ಹೋದಾಗ ಸೀರೆ ಎಳೆದು

ಅವಮಾನಪಡಿಸಿರುತ್ತಾನೆ ಸಾಕ್ಷಿ ನಾನು ಆ ಸಮಯದಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಆರೋಪಿ ನಂ.೧ ಈ ಹಾಟ್ಯಾನದು ಬಹಳ ಆಗಿದೆ ಬಿಡಬೇಡಿರಿ ಎಂಧು ಹೇಳಿದಳು ಎಂದರೆ ಸಾಕ್ಷಿ ಆ ಸಮಯದಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಆರೋಪಿ ನಂ.೩ ಕೈಯಲ್ಲಿದ್ದ ಕುರುಪಿಯನ್ನು ಚಾಸಾ-೧ ರವರ ಕಡೆಗೆ ಬೀಸಿ ಒಗೆದಳು, ಅದು ಚಾಸಾ-೬ ರವರ ಕಾಲಿಗೆ ತಾಗಿತು ಎಂದರೆ ಎಂದರೆ ಸಾಕ್ಷಿ ಆ ಸಮಯದಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಚಾಸಾ-೭ ರವರಿಗೆ ಆರೋಪಿ ನಂ.೪ ಮತ್ತು ೫ ರವರು ತಡೆದು ನಿಲ್ಲಿಸಿದರು ಎಂದರೆ ಸಾಕ್ಷಿ ಆ ಸಮಯದಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಆರೊಪಿ ನಂ.೭ ರವರು ಸದರಿ ಕುರುಪಿಯನ್ನು ತೆಗೆದುಕೊಂಡು ಚಾಸಾ-೭ ರವರಿಗೆ ಹೊಡೆದಿರುತ್ತಾನೆ ಎಂದರೆ ಸಾಕ್ಷಿ ಆ ಸಮಯದಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಚಾಸಾ-೫ ರವರು ಬಿಡಿಸಲು ಹೋದಾಗ ಆರೊಪಿ ನಂ.೮ ಮತ್ತು ೯ ರವರು ತಡೆದು ನಿಲ್ಲಿಸಿ ಬೆನ್ನ ಮೆಲೆ ಮತ್ತು ಕಪಾಳದ ಮೇಲೆ ಹೊಡೆದಿರುತ್ತಾರೆ ಎಂದರೆ ಸಾಕ್ಷಿ ಆ ಸಮಯದಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಚಾಸಾ-೮ ರಿಂದ ೧೦ ರವರು ಸದರಿ ಜಗಳ ಬಿಡಿಸಿರುತ್ತಾರೆ ಎಂದರೆ ಸಾಕ್ಷಿ ಆ ಸಮಯದಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ.

**ಪಾಟೀ ಸವಾಲು ಆರೋಪಿತರ ಪ**ರ ಶ್ರೀ ಬಿ.ಎ.ಡಿ. **ವಕೀಲರಿಂದ**

ಈ ಘಟನೆ ಕುರಿತು ಪೋಲಿಸರು ನನ್ನ ಹೇಳಿಕೆಯನ್ನುಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ನಾನು ಸಹ ಈ ಘಟನ ಕುರಿತು ಪೋಲಿಸರಿಗೆ ಠಾಣೆಗೆ ಹೋಗಿ ಹೇಳಿಕೆ ನೀಡಿರುವುದಿಲ್ಲ. ನಾನು ಜಗಳನವನ್ನು ಕಣ್ಣಾರೆ ನೋಡಿರುವುದಿಲ್ಲ ಎಂದರೆ ಸರಿ. ಯಾರು ಯಾರಿಗೆ ಹೊಡೆದರು, ಹೇಗೆ ಹೊಡೆದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಚಾಸಾ-೧ ರವರ ಜಮೀನನ್ನು ಪಾಲಿಗೆ ಬಿತ್ತು ಬೆಳೆ ಮಾಡಿರುತ್ತೇನೆ, ಆ ಸಮಯದಲ್ಲಿ ಈ ಘಟನೆ ನಡೆದಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ